155ನೇಪ ನಿ=72=(132)
4RR
03/11/24

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜು ರವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ.**

*********

**ವಿಷಯ:–**

ಬಿ.ಬಿ.ಎಂ.ಪಿ.ಯಲ್ಲಿ ಘನತ್ಯಾಜ್ಯ ನಿರ್ವಹಣೆ, ನೈರ್ಮಲ್ಯ ಹಾಗೂ ಆರೋಗ್ಯ ಇಲಾಖೆ ಕೆಲಸ ಕಾರ್ಯಗಳು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಯಿಂದ ಪದೋನ್ನತಿ ಹಿತದೃಷ್ಟಿಯಿಂದ ಹೆಲ್ತ್ ಸೂಪರ್ ವೈಸರ್ ಗ್ರೂಪ್–ಬಿ ಹದ್ದೆಗಳನ್ನು ಸೃಜಿಸಲಾಗಿದ್ದು, 75 ಹೆಲ್ತ್ ಸೂಪರ್‌ವೈಸರ್‌ಗಳಿಗೆ ಉಪ ವಿಭಾಗ ಮಟ್ಟದಲ್ಲಿ ಪದೋನ್ನತಿ ನೀಡಲಾಗಿದ್ದು, ಸದರಿ ಹೆಲ್ತ್ ಸೂಪರ್ ವೈಸರ್‌ಗಳು ಈಗಾಗಲೇ ಕಿರಿಯ ಮತ್ತು ಹಿರಿಯ ಆರೋಗ್ಯ ಮತ್ತು ನೈರ್ಮಲ್ಯ ವಿಷಯಗಳಲ್ಲಿ ಸಾಕಷ್ಟು ಅನುಭವ ಹೊಂದಿದ್ದರೂ ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಮತ್ತು ನೈರ್ಮಲ್ಯ ಕರ್ತವ್ಯ ನಿರ್ವಹಿಸಲು ಬಳಕೆ ಮಾಡಿಕೊಳ್ಳದಿರುವುದು, ವಿದ್ಯಾರ್ಹತೆ, ತರಬೇತಿ ಮತ್ತು ಅನುಭವವಿಲ್ಲದ ಕೇವಲ ಎನ್.ಸಿ.ಸಿ. ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳನ್ನು (ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಮತ್ತು ನೈರ್ಮಲ್ಯ ಕರ್ತವ್ಯ ನಿರ್ವಹಿಸಲು) ಮಾರ್ಷಲ್‌ಗಳಾಗಿ ನೇಮಕ ಮಾಡಿಕೊಂಡಿರುವುದು, ಸರ್ಕಾರ ಹೆಲ್ತ್ ಸೂಪರ್‌ವೈಸರ್ ಹುದ್ದೆಯ ಸೃಜನೆ ಉದ್ದೇಶ ಹಾಗೂ ಸಾರ್ವಜನಿಕರ ತೆರಿಗೆ ಹಣ ವ್ಯರ್ಥವಾಗುತ್ತಿರುವ ಕುರಿತು.

**ಉತ್ತರ:–**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಂಜೂರಾಗಿರುವ 198 ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳ ಪೈಕಿ 75 ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳನ್ನು ಹೆಲ್ತ್ ಸೂಪರ್ ವೈಸರ್ ಗ್ರೂಪ್–ಬಿ ಹುದ್ದೆಗೆ ಉನ್ನತೀಕರಿಸಿ ಹಾಗೆ ಉನ್ನತೀಕರಿಸಿದ ಹೆಲ್ತ್ ಸೂಪರ್ ವೈಸರ್‌ಗಳ ಹುದ್ದೆಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಉಲ್ಲೇಖಿಸಿ ಸರ್ಕಾರದ ಆದೇಶ ಸಂಖ್ಯೆ : ನಅಇ 266 ಎಂಎನ್‌ಯು 2022, ದಿನಾಂಕ:24.03.2023 ಮತ್ತು ಆದೇಶ ಸಂಖ್ಯೆ:ನಅಇ 69 ಬಿಬಿಎಲ್ 2023, ದಿನಾಂಕ: 19–07–2024ರಂದು ಆದೇಶ ಹೊರಡಿಸಲಾಗಿರುತ್ತದೆ. ಮುಂದುವರೆದು, ಪಾಲಿಕೆಗೆ ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಮಂಜೂರು ಮಾಡಿ ಆದೇಶಿಸಿರುವ ಸರ್ಕಾರದ ಮೇಲ್ಕಂಡ ಆದೇಶಗಳನ್ನು ಪಾಲಿಕೆಯ ಆದೇಶ ಸಂಖ್ಯೆ:ಬಿ12(4)/ಪಿಆರ್/142/2023–24, ದಿನಾಂಕ:29–11–2023 ಮತ್ತು ಸಂಖ್ಯೆ:ಬಿ12(4)/ಪಿಆರ್/142/2023–24, ದಿನಾಂಕ:27–08–2024ರಂತೆ ಪಾಲಿಕೆಯಲ್ಲಿ ಅಳವಡಿಸಿಕೊಂಡು, ಉನ್ನತೀಕರಿಸಿದ ಹೆಲ್ತ್ ಸೂಪರ್ ವೈಸರ್‌ಗಳು ಹುದ್ದೆಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗಧಿಪಡಿಸಿ ಆದೇಶಿಸಲಾಗಿದೆ. ದಿನಾಂಕ:29–11–2023 ರ ಪಾಲಿಕೆಯ ಆದೇಶ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಅದರಲ್ಲಿ ನಿಗದಿಪಡಿಸಲಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಹೆಲ್ತ್ ಸೂಪರ್ ವೈಸರ್‌ಗಳು ನಿರ್ವಹಿಸುತ್ತಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಬಗೆಯ ತ್ಯಾಜ್ಯ ಸಂಗ್ರಹಣೆ, ಸಂಸ್ಕರಣೆ ಮತ್ತು ವಿಲೇವಾರಿ (ಬಯೋ ಮೆಡಿಕಲ್ ವೇಸ್ಟ್ ಹೊರತುಪಡಿಸಿ) ಕಾಮಗಾರಿಯನ್ನು ನಿರ್ವಹಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿ.ಎಸ್.ಡಬ್ಲ್ಯೂ.ಎಂ.ಎಲ್) ಸಂಸ್ಥೆಯನ್ನು ಸೃಜಿಸಲಾಗಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಅಗತ್ಯತೆಗೆ ತಕ್ಕಂತೆ ಪಾಲಿಕೆ ವತಿಯಿಂದ

...2...

ನಿಯೋಜಿಸಲಾಗಿರುತ್ತದೆ. ಅದರಂತೆ, ಘನತ್ಯಾಜ್ಯ ನಿಯಮಾವಳಿ-2016 ಹಾಗೂ ಬಿಬಿಎಂಪಿ ಬೈಲಾ-2020ರ ನಿಯಮಗಳನ್ನು ಪಾಲಿಸದ ಸಾರ್ವಜನಿಕರಿಗೆ ದಂಡ ವಿಧಿಸಲು ಹಾಗೂ ತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಮಾರ್ಷಲ್‌ಗಳನ್ನು ಬಿಎಸ್‌ಡಬ್ಲ್ಯೂಎಮ್‌ಎಲ್ ಸಂಸ್ಥೆಗೆ ನಿಯೋಜಿಸಲಾಗಿದ್ದು, ಸದರಿ ಮಾರ್ಷಲ್‌ಗಳಿಂದ ಕಾರ್ಯ ನಿರ್ವಹಿಸಲಾಗುತ್ತಿರುತ್ತದೆ.

---

**ಸಂಖ್ಯೆ: ನಅಇ 137 ಬಿಬಿಎಲ್ 2025**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ